# ನಗರಸಭಾ ಕಾರ್ಯಾಲಯ,ಹರಿಹರ

ಫೋನ್ 08192-244266, ಸಹಾಯವಾಣಿ 08192- 242030,ಫ್ಯಾಕ್ಸ್: 08192-241024,
Website:www.hariharcity.gov.in

ನಂ.ನಸಹ/ಬಿ.ಆರ್.ಜಿ.ಇ.ಎಫ್/ಸಿಆರ್: 02/2009-10 ದಿನಾಂಕ:-27/05/2009

## ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿವಿದ ಇಲಾಖೆಗಳಿಂದ ಅಭಿವೃದ್ಧಿ ಹೊಂದಿರುವ ಮತ್ತು ಸಾಧನೆ ಮಾಡುವ ಬಗ್ಗೆ ವಸ್ತು ಪ್ರದರ್ಶನ (ಶಿಕ್ಷಣ, ಆರೋಗ್ಯ, ಕೃಷಿ, ನೈರ್ಮಲ್ಯ ಕೈಗಾರಿಕೆ ಮತ್ತು ಇತರೆ ಯೋಜನೆಗಳ ಹೆಚ್.ಆರ್.ಡಿ. ಬಗ್ಗೆ ಶಿಬಿರಗಳು ಮತ್ತು ಮೇಳಗಳು), ಕೊಳಚೆ ಅಭಿವೃದ್ಧಿ ಯೋಜನೆ/ ಬಿ.ಆರ್.ಜಿ.ಎಫ್. ಜಿಲ್ಲಾಮಟ್ಟದಲ್ಲಿ ವಸ್ತು ಪ್ರದರ್ಶನ. ಮತ್ತು ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಗಾರ/ಸೇಮಿನಾರ್ (ವಾರ್ಷಿಕ-2 ಕಾರ್ಯಗಾರಗಳು) ಭಾಗವಹಿಸುವ ಚುನಾಯಿತ ಪ್ರತಿನಿಧಿಗಳು, ಸಮುದಾಯ ಪ್ರತಿನಿಧಿಗಳು, (Professional + Experience) ಬಾಲ ಕಾರ್ಮಿಕರ ಬಗ್ಗೆ, ಅಂಗವಿಕಲರ ಬಗ್ಗೆ, ಆರೋಗ್ಯ ಸೌಲಭ್ಯ ಸಿಗುವ ಬಗ್ಗೆ, ಸಾಮಾಜಿಕನ್ಯಾಯ ಮತ್ತು ಮಹಿಳಾ ಅಭಿವೃದ್ದಿ ಕುರಿತು ಕೈಗಾರಿಕೆ ಬಗ್ಗೆ, ಪ.ಜಾತಿ/ಪ.ಪಂ.ದವರಿಗೆ ಸವಲತ್ತುಗಳ ಬಗ್ಗೆ, ವಲಸೆ ಹೋಗುವವರ ಬಗ್ಗೆ ಬ್ಯಾಂಕ್‌ಗಳಲ್ಲಿ ಇಲಾಖೆಗಳ ಸೌಲಭ್ಯಗಳ ಬಗ್ಗೆ ಕಾನೂನು ಅರಿವು ಸಂವಿದಾನ ಅರಿವು, ಮತ್ತು ಪಂಚಾಯತ್‌ರಾಜ್‌ನ ಕಾನೂನುಗಳ ಅರಿವು ಮತ್ತು ಪಂಚಾಯತ್/ನಗರಸಭೆಗಳ ಕರ್ತವ್ಯಗಳ ಬಗ್ಗೆ ಅರಿವುಮೂಡಿಸುವ ಬಗ್ಗೆ ಟೆಂಡರ್ ಕರೆಯಲಾಗಿದೆ. ಆಸಕ್ತಿಯಳ್ಳ ತರಬೇತಿ ನೀಡುವ ಸಂಸ್ಥೆಗಳು ಹಾಗೂ ಸಾಮಗ್ರಿ ಸರಬರಾಜುದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ ಟೆಂಡರ್ ಫಾರಂಗಾಗಿ ಅರ್ಜಿ ಶುಲ್ಕವನ್ನು ಕಛೇರಿಯ ನಗದು ಶಾಖೆಯಲ್ಲಿ ಪಾವತಿಸಿ ಅಥವಾ ಪೌರಾಯುಕ್ತರು ನಗರಸಭೆ, ಹರಿಹರ. ಇವರ ಹೆಸರಿಗೆ ಬ್ಯಾಂಕ್ ಡಿ.ಡಿ. ಕಳುಹಿಸಿ ಪಡೆಯಬಹುದಾಗಿದೆ.

1. ಟೆಂಡರ್ ಫಾರಂ ಪಡೆಯಲು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:-29/05/2009 ಸಂಜೆ 4-00 ಗಂಟೆಗೆ.
2. ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅಂತಿಮ ದಿನಾಂಕ:-31/05/2009 ರ ಸಂಜೆ 4-00 ಗಂಟೆಗೆ
3. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ:-03/06/2009ರ ಸಂಜೆ 4-00 ಗಂಟೆಗೆ
4. ಟೆಂಡರ್ ಬಾಕ್ಸ್ ತೆರೆಯುವ ದಿನಾಂಕ:-03/06/2009 ಅಥವಾ ನಿಗದಿ ಪಡಿಸಿದ ಇತರೇ ದಿನಾಂಕದಂದು.

**ಹಿಂದುಳಿದ ಪ್ರದೇಶಾಭಿವೃದ್ಧಿ ನಿಧಿ ಯೋಜನೆಯಡಿ**

| ಕ್ರ.ಸಂ. | ಕಾರ್ಯಕ್ರಮ ವಿವರ | ಭೌತಿಕ ಗುರಿ | ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ) | ಟೆಂಡರ್ ಫಾರಂ ಶುಲ್ಕ | ಇ.ಎಂ.ಡಿ. ಮೊತ್ತ | ಅವಧಿ |
|---|---|---|---|---|---|---|
| 1 | ವಿವಿದ ಇಲಾಖೆಗಳಿಂದ ಅಭಿವೃದ್ಧಿ ಹೊಂದಿರುವ ಮತ್ತು ಸಾಧನೆ ಮಾಡುವ ಬಗ್ಗೆ ವಸ್ತು ಪ್ರದರ್ಶನ (ಶಿಕ್ಷಣ, ಆರೋಗ್ಯ, ಕೃಷಿ, ನೈರ್ಮಲ್ಯ ಕೈಗಾರಿಕೆ ಮತ್ತು ಇತರೆ ಯೋಜನೆಗಳ ಹೆಚ್.ಆರ್.ಡಿ. ಬಗ್ಗೆ ಶಿಬಿರಗಳು ಮತ್ತು ಮೇಳಗಳು), ಕೊಳಚೆ ಅಭಿವೃದ್ಧಿ ಯೋಜನೆ/ ಬಿ.ಆರ್.ಜಿ.ಎಫ್. ಜಿಲ್ಲಾಮಟ್ಟದಲ್ಲಿ ವಸ್ತು ಪ್ರದರ್ಶನ. | 04 ವಸ್ತು ಪ್ರದರ್ಶನ 31 ವಾರ್ಡ್‌ಗಳಿಗೆ | 09.39 ಲಕ್ಷ | 1000/- | 24000/- | ಪ್ರತಿ ವಸ್ತು ಪ್ರದರ್ಶನಕ್ಕೆ 15 ದಿನಗಳು |
| 2 | ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಗಾರ/ಸೇಮಿನಾರ್ (ವಾರ್ಷಿಕ-2 ಕಾರ್ಯಗಾರಗಳು) ಭಾಗವಹಿಸುವ ಚುನಾಯಿತ ಪ್ರತಿನಿಧಿಗಳು, ಸಮುದಾಯ ಪ್ರತಿನಿಧಿಗಳು, (Professional+Experience) ಬಾಲ ಕಾರ್ಮಿಕರ ಬಗ್ಗೆ, | 02 ಕಾರ್ಯಾಗಾರ 31 ವಾರ್ಡ್‌ಗಳಿಗೆ | 6.08 ಲಕ್ಷ | 1000/- | 15200/- | ಪ್ರತಿ ಕಾರ್ಯಾಗಾರಕ್ಕೆ 5 ದಿನಗಳು |

| | | | | | | |
|---|---|---|---|---|---|---|
| | ಅಂಗವಿಕಲರ ಬಗ್ಗೆ, ಆರೋಗ್ಯ ಸೌಲಭ್ಯ ಸಿಗುವ ಬಗ್ಗೆ, ಸಾಮಾಜಿಕನ್ಯಾಯ ಮತ್ತು ಮಹಿಳಾ ಅಭಿವೃದ್ಧಿ ಕುರಿತು ಕೈಗಾರಿಕೆ ಬಗ್ಗೆ, ಪ.ಜಾತಿ/ಪ.ಪಂ.ದವರಿಗೆ ಸವಲತ್ತುಗಳ ಬಗ್ಗೆ, ವಲಸೆ ಹೋಗುವವರ ಬಗ್ಗೆ ಬ್ಯಾಂಕ್‌ಗಳಲ್ಲಿ ಇಲಾಖೆಗಳ ಸೌಲಭ್ಯಗಳ ಬಗ್ಗೆ ಕಾನೂನು ಅರಿವು ಸಂವಿದಾನ ಅರಿವು, ಮತ್ತು ಪಂಚಾಯತ್‌ರಾಜ್‌ನ ಕಾನೂನುಗಳ ಅರಿವು ಮತ್ತು ಪಂಚಾಯತ್/ನಗರಸಭೆಗಳ ಕರ್ತವ್ಯಗಳ ಬಗ್ಗೆ ಅರಿವು | | | | | |

**ಷರತ್ತುಗಳು :-**

1. ಟೆಂಡರ್ ಸಲ್ಲಿಸುವವರು ಅಧಿಕೃತ ಏಜೆನ್ಸಿಗಳಾಗಿರಬೇಕು ಮತ್ತು ವ್ಯಾಟ್ ಹೊಂದಿದ್ದು, ನೊಂದಣಿ ಪತ್ರದ ಪ್ರತಿಯನ್ನು ಟೆಂಡರ್‌ನೊಂದಿಗೆ ಲಗತ್ತಿಸಿರಬೇಕು.
2. ಟೆಂಡರ್ ಸಲ್ಲಿಸುವವರು ವ್ಯಾಟ್ ಕ್ಲಿಯರೆನ್ಸ್ ಹೊಂದಿರತಕ್ಕದ್ದು,
3. ಅಧಿಕೃತ ಟೆಂಡರ್‌ದಾರರು ಉತ್ತಮಗುಣಮಟ್ಟದ ವಸ್ತು ಪ್ರದರ್ಶನ/ಕಾರ್ಯಾಗಾರ ನಡೆಸಿಕೊಡತಕ್ಕದ್ದು, ಹಾಗೂ ಕಾರ್ಯಾಗಾರ/ವಸ್ತು ಪ್ರದರ್ಶನದ ಗುಣಮಟ್ಟದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಸಂಬಂಧಪಟ್ಟವರಿಗೆ ಪರಿಶೀಲನೆಗೆ ಒಳಪಡಿಸಿ ಪರಿಶೀಲನಾ ವರದಿ ಬಂದ ನಂತರ ಮೊಬಲಗು ಪಾವತಿಗೆ ಕ್ರಮಕೈಗೊಳ್ಳಲಾಗುವುದು.
4. ಪತ್ರಿ ವಸ್ತು ಪ್ರದರ್ಶನ/ಕಾರ್ಯಾಗಾರ ಪ್ರಾರಂಭಿಸುವ 15 ದಿನಗಳ ಮುಂಚಿತವಾಗಿ ಸದರಿ ಕಾರ್ಯಕ್ರಮಗಳ ಸ್ಥಳವನ್ನು ಸಾರ್ವಜನಿಕ ಪ್ರಕಟಣೆ ಮೂಲಕ ಪ್ರಚಾರಗೊಳಿಸತಕ್ಕದ್ದು.
5. ಪ್ರತಿ ವಸ್ತು ಪ್ರದರ್ಶನ/ಕಾರ್ಯಾಗಾರ ಪೂರ್ಣಗೊಂಡ ನಂತರ ಮೇಲಾಧಿಕಾರಿಗಳಿಗೆ ವರದಿ ನೀಡತಕ್ಕದ್ದು.
6. ಪ್ರತಿ ವಸ್ತು ಪ್ರದರ್ಶನ/ಕಾರ್ಯಾಗಾರ ನಡೆಸಿದ ಬಗ್ಗೆ, ವಿಡಿಯೋ ಚಿತ್ರಿಕರಣ ನಡೆಸಿ ಪ್ರತಿಯನ್ನು ಜಿಲ್ಲಾಪಂಚಾಯತ್/ನಗರಸಭೆ ಹಾಜರ್ ಪಡಿಸಬೇಕು.
7. ಪ್ರತಿ ಟೆಂಡರ್‌ನಲ್ಲಿ ನಮೂದಿಸದ ವಸ್ತು ಪ್ರದರ್ಶನಗಳನ್ನು ಆಯಾ ವಸ್ತು ಪ್ರದರ್ಶನದಲ್ಲಿನ ವಿಷಯಗಳನ್ನು ಪ್ರತ್ಯೇಕ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು, ಮತ್ತು ಪೂರ್ಣಪ್ರಮಾಣದ ಪ್ರದರ್ಶನಕ್ಕೆ ವತ್ತುನೀಡತಕ್ಕದ್ದು.
8. ಪ್ರತಿ ಕಾರ್ಯಾಗಾರಕ್ಕೆ ಸಂಬಂಧಪಟ್ಟ ಚುನಾಯಿತ ಪ್ರತಿನಿಧಿಗಳು ಮತ್ತು ಸಮುದಾಯ ಪ್ರತಿನಿಧಿಗಳು ಕಡ್ಡಾಯವಾಗಿ ಪಾಲ್ಗೋಳ್ಳುವಂತೆ ಕ್ರಮ ತೆಗೆದುಕೊಳ್ಳತಕ್ಕದ್ದು.
9. ಟೆಂಡರ್ ದರ ನಮೂದಿಸುವಾಗ ಸಾಗಣಿಕೆ ವೆಚ್ಚ, ತೆರಿಗೆ ವೆಚ್ಚ, ತೆರಿಗೆ ಇತ್ಯಾದಿ ವೆಚ್ಚ ಸೇರಿ ದರ ನಮೂದಿಸತಕ್ಕದ್ದು,
10. ಅಂಗಿಕೃತ ಟೆಂಡರ್‌ದಾರರು ಸರಕು ಸರಬರಾಜು ಬಗ್ಗೆ ರೂ. 100/- ಗಳ ಸ್ಟಾಂಪ್ ಕಾಗದಲ್ಲಿ ಮುಚ್ಚುಳಿಕೆ ಪತ್ರ ಬರೆದುಕೊಡತಕ್ಕದ್ದು, ಮುಚ್ಚುಳಿಕೆ ಮಾದರಿ ನಂತರದಲ್ಲಿ ಕಛೇರಿಯಲ್ಲಿ ನೀಡಲಾಗುವುದು.
11. ಟೆಂಡರ್ ಸಲ್ಲಿಸಬಯುಸುವವರು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಯಾವ ಉದ್ದೇಶಕ್ಕೆ ಟೆಂಡರ್ ಸಲ್ಲಿಸಲು ಬಯಸುವವರೋ ಅದನ್ನು ಬರೆದು ಟೆಂಡರ್ ಅರಗಿನೊಂದಿಗೆ ಸೀಲ್ ಮಾಡಿರಬೇಕು.
12. ಟೆಂಡರ್‌ದಾರರು ಈ ಮೇಲ್ಕಂಡ ಸಾಮಗ್ರಿಗಳವಾರು ಕ್ರೂಢಿಕೃತ ದರಪಟ್ಟಿಯ ಜೊತೆಗೆ ಐಟಂವಾರು ದರಗಳ ಪ್ರತ್ಯೇಕ ದರಪಟ್ಟಿ ಲಗತ್ತಿಸಿರಬೇಕು. ಆದ್ದರಿಂದ ಪ್ರತಿಯೊಂದು ಐಟಂವಾರು ದರದ ವಿವರ ತಿಳಿಯಲು ಲಗತ್ತಿಸಬೇಕು.
13. ಇ.ಎಂ.ಡಿ. ಹಣವನ್ನು ಪೌರಾಯುಕ್ತರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಪಡೆದು ಟೆಂಡರ್ ಫಾರಂನೊಂದಿಗೆ ಲಗತ್ತಿಸಬೇಕು.
14. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಹಾಗೂ ಟೆಂಡರ್ ಷರತ್ತು ಬದಲಾಯಿಸಲು ಅಥವಾ ಸ್ವೀಕರಿಸುವ ಹಕ್ಕುನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ.
15. ಹೆಚ್ಚಿನ ಮಾಹಿತಿಗಾಗಿ ಪೌರಾಯುಕ್ತರು ನಗರಸಭೆ ಹರಿಹರರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.

ಅಧ್ಯಕ್ಷರು,
ನಗರಸಭೆ, ಹರಿಹರ.

ಪೌರಾಯುಕ್ತರು,
ನಗರಸಭೆ, ಹರಿಹರ.

C:\Documents and Settings\Praveen\Desktop\Tender Notification.doc